ಆಲೋಚಿಸುವುದೇ 'ಮನನ'. ನಾವು ಕೇಳಿರುವ ವಿಷಯದ ಎಲ್ಲ ಆಯಾಮಗಳ ಬಗ್ಗೆಯೂ ವಿಶ್ಲೇಷಿಸಬೇಕು. ಆಗಲೇ ಅದು ಎಷ್ಟು ಸಾಧಕ, ಎಷ್ಟು ಬಾಧಕ ಎಂದು ಗೊತ್ತಾಗುವುದು; ಅದರಲ್ಲಿರುವ ಗಟ್ಟಿತನ – ಜೊಳ್ಳುತನಗಳ ತಿಳಿವಳಿಕೆ ಒದಗುವುದು ಆಗಲೇ. ವಿಚಾರತೋಲನದ ಈ ಮಾರ್ಗವೇ ಮನನ. ವಿಷಯದ ಎಲ್ಲ ಮಗ್ಗಲುಗಳನ್ನು ಹೀಗೆ ಮತ್ತೆ ಮತ್ತೆ ಅವಲೋಕಿಸುವುದೇ 'ಮನನ.' ಶ್ರವಣದಿಂದ ಒದಗಿದ ವಿವರವೊಂದು ಮನನದಿಂದ ಗಟ್ಟಿಯಾಯಿತು ಎಂದಿಟ್ಟುಕೊಳ್ಳಿ. ಅಷ್ಟಕ್ಕೇ ಆ ವಿವರಕ್ಕೆ ಸಾರ್ಥಕತೆಗೆ ಒದಗಿತು ಎನ್ನುವಂತಿಲ್ಲ. ನಮಗೆ ಒದಗಿದ ವಿವರ ಅದು ಗಟ್ಟಿಯೊಂದೂ ಸ್ವೀಕಾರಾರ್ಹವೆಂದೂ ಒಳಿತಾದುದೆಂದೂ ಸಿದ್ಧವಾದ ಮೇಲೆ ಅದನ್ನು ನಾವು ಜೀವನದಲ್ಲಿ ಅನ್ವಯ ಮಾಡಿಕೊಳ್ಳಬೇಕು. ಇದೇ 'ನಿದಿಧ್ಯಾಸನ'. ಹೀಗಾಗಿ ಯಾವುದೇ ಸಂಗತಿಯ ಗುರಿ ನಿದಿಧ್ಯಾಸನ; ಅದು ಮನನದ ಪರೀಕ್ಷೆಯಲ್ಲಿ ಗೆದ್ದು ಬರಬೇಕು. ಇದು ಭಾರತೀಯ ಜ್ಞಾನಪರಂಪರೆಯ ಕ್ರಮ.

ಶಿಷ್ಯನಿಗೆ ಗುರುಗಳು ಹೇಳಿದ ಪಾಠವನ್ನು ಅವನು ಕಿವಿಯಿಂದಲೇನೋ ಚೆನ್ನಾಗಿ ಕೇಳಿದ್ದ; ಆದರೆ, ವಿವೇಕದಿಂದ ಅದನ್ನು ಮನನ ಮಾಡುವ ತೊಂದರೆ ತೆಗೆದುಕೊಳ್ಳಲಿಲ್ಲ. ಈ ಕಾರಣದಿಂದಲೇ ಅವನು ತೊಂದರೆಗೆ ಒಳಗಾದ. ಎಲ್ಲೆಲ್ಲೂ ಇರುವ ದೇವರು ಆನೆಯಲ್ಲೂ ಇರುತ್ತಾನೆ – ಎಂದು ಅನ್ವಯಿಸಿಕೊಂಡದ್ದೂ ಸರಿಯಾಗಿಯೇ ಇದೆ; ಆದರೆ, ಈ ಅನ್ವಯಬುದ್ಧಿ ಆನೆಗಷ್ಟೆ ನಿಲ್ಲದೆ ಮಾವುತನಿಗೂ ವಿಸ್ತರಿಸಬೇಕಿತ್ತು. 'ಎಲ್ಲೆಲ್ಲೂ ಎಲ್ಲೆದರಲ್ಲೂ' ಎನ್ನುವುದರಲ್ಲಿ ಆ ಮಾವುತನೂ ಸೇರುತ್ತಾನಷ್ಟೆ! ಮಾವುತ ಹೇಳಿದ ಮಾತನ್ನು ಆ ಶಿಷ್ಯ ಕೇಳಬೇಕಿತ್ತು. ವಿದ್ಯೆಯೊಂದು ಅಥವಾ ಮಾತೊಂದು ಅಥವಾ ಘಟನೆಯೊಂದು ಪೂರ್ಣವಾಗಿ ಅರ್ಥವಾಗದೆಹೋದಾಗ ಎಂಥ ಅನರ್ಥಕ್ಕೆ ದಾರಿಯಾಗುತ್ತದೆ ಎನ್ನುವುದಕ್ಕೆ ಅವನ ಅವಿವೇಕದ ವರ್ತನೆಯೇ ಸಾಕ್ಷ್ಯವಾಗಿದೆ. ನಮ್ಮ ನಿತ್ಯದ ಆಗುಹೋಗುಗಳಲ್ಲಿಯೂ ಇಂಥ ಹಲವು ಅನರ್ಥಗಳನ್ನು ಎಳೆದುಕೊಳ್ಳುತ್ತಿರುತ್ತೇವೆ. ಮನೆಯಲ್ಲಿ ತಂದೆತಾಯಿ ಯಾವುದೋ ಸಂದರ್ಭದಲ್ಲಿ 'ನಿನ್ನ ಮುಖವನ್ನೇ ನನಗೆ ತೋರಿಸಬೇಡ' ಎಂದು ಹೇಳುತ್ತಾರೆ. ನಾವು ಅವರ ಮಾತಿನ ಇಂಗಿತ ಏನೆಂದು ಅರ್ಥ ಮಾಡಿಕೊಳ್ಳದೆಯೇ ಮನೆ ಬಿಟ್ಟು ಹೊರಟೇಬಿಡುತ್ತೇವೆ. ನಾವು ಮಾಡಿರುವ ತಪ್ಪಿನಿಂದ ನೊಂದ ಮನಸ್ಸು ಆ ರೀತಿಯ ಮಾತನ್ನು ಆಡಿಸಿರುತ್ತದೆ. ಆದರೆ, ನಾವು ಅದನ್ನು ಅರ್ಥ ಮಾಡಿಕೊಳ್ಳದೆ ದುಡುಕಿನಿಂದ ನಡೆದು ಹೆತ್ತವರ ಪಾಲಿಗೆ ದುರಂತವನ್ನೇ ಸೃಷ್ಟಿಸುತ್ತೇವೆ. ದುರಂತದ ಇಂಥ ಸರಮಾಲೆಯನ್ನೇ ನಮ್ಮ ಅಲ್ಪಮತಿಯಿಂದ ಪೋಣಿಸುತ್ತ ನಮ್ಮ ಜೀವನವನ್ನೂ ನಮ್ಮನ್ನು ನಂಬಿದವರ ಜೀವನವನ್ನೂ ಅಪಾಯಕ್ಕೆ ಈಡುಮಾಡುತ್ತಿರುತ್ತೇವೆ. ಆದುದರಿಂದ ನಾವು ಕೇಳಿದ ಮಾತನ್ನೂ ನೋಡಿದ ಘಟನೆಯನ್ನೂ ಸಮಗ್ರವಾಗಿ ವಿಶ್ಲೇಷಿಸಿ, ವಿಮರ್ಶಿಸಿ ಬಳಿಕವಷ್ಟೆ ತೀರ್ಮಾನಕ್ಕೆ ಬರಬೇಕು.

ವಾಚ್ಯಾರ್ಥವನ್ನಷ್ಟೆ ಹಿಡಿದು ಅಥವಾ ಮೇಲ್ಪದರ ಅರ್ಥವನ್ನಷ್ಟೆ ಗ್ರಹಿಸಿ ಅದನ್ನು ಅನ್ವಯಿಸಲು ತೊಡಗಿದರೆ ಎಷ್ಟೋ ಪೇಚಿನ ಪ್ರಸಂಗಗಳನ್ನು ಎದುರಿಸಬೇಕಾಗುತ್ತದೆ. ದಾರಿಯನ್ನು ತಿಳಿಯುವ ಉದ್ದೇಶದಿಂದ ಯಾರನ್ನೋ ನಾವು 'ಈ ರಸ್ತೆ ಎಲ್ಲಿಗೆ ಹೋಗುತ್ತದೆ?' ಎಂದು ಕೇಳುತ್ತೇವೆ. ಅವರು ಅರ್ಥವಾಗದೆಯೋ ಅಥವಾ ಕುಚೋದ್ಯಕ್ಕೋ 'ಎಲ್ಲಿಗೂ ಹೋಗದು, ಇಲ್ಲಿಯೇ ಇರುತ್ತೆ!' ಎಂದರೆ ಆಗ ನಮ್ಮ ಪಾಡು ಹೇಗಿರುತ್ತದೆ? 'ಹೊಟ್ಟೆ ತುಂಬ ತಿನ್ನು' ಎಂದು ಹೇಳಿದ್ದಾರೆಂದು ಹೊಟ್ಟೆಯನ್ನು ಒಂದು ಚೀಲದಂತೆ ಭಾವಿಸಿಕೊಂಡು ಅದಕ್ಕೆ ಅನ್ನವನ್ನೋ ರೊಟ್ಟಿಯನ್ನೋ ತುಂಬಿಸಿಕೊಳ್ಳುತ್ತಹೋದರೆ ಅಜೀರ್ಣದ ಅವಸ್ಥೆಯನ್ನು